ಆಗಿ ಬಿಡುಗಡೆ ಮಾಡತಕ್ಕಂಥಾದ್ದು ಅಲ್ಲದೇನೆ, ಅವರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಲು ಡೆಲ್ಲಿಗೆ ಹೋಗುವ ಪ್ರಯತ್ನವನ್ನು ನಡೆಸಿದ್ದಾರೆ. ಅವರನ್ನು ಡೆಲ್ಲಿಗೆ ತಲುಪಿಸತಕ್ಕಂಥ ಒಂದು ಪ್ರಯತ್ನವನ್ನಾದರೂ ಮಾಡಿ. ಮದ್ರಾಸ್‌ನಲ್ಲಿ ಕೂಡ ನಮ್ಮ ರೈತರ ಬಂಧನವಾಗಿದೆ ಎಂದು ತಿಳಿದಿದೆ. ಅವರ ಕಷ್ಟಸುಖವನ್ನು ಸರಕಾರದವರು ಯಾರಾದರೂ ವಿಚಾರಿಸಿದ್ದೀರಾ ? ನಮ್ಮ ರೈತರು ಮದ್ರಾಸ್‌ಗೆ ದರೋಡೆ ಮಾಡಲು ಹೋಗಿದ್ದಾರೆಯೇ ? ಯಾರ ತಲೆ ಒಡೆಯಲು ಹೋಗಿದ್ದಾರೆಯೇ ? ಅಥವಾ ಎಲ್‌ಟಿಟಿ ಚಟುವಟಿಕೆಗಳನ್ನು ಮಾಡಲು ಹೋಗಿದ್ದಾರೋ, ಏನೂ ಇಲ್ಲ ಅವರೂ ಕೂಡ ಈ ಆದೇಶದ ರಾಜಧಾನಿಯನ್ನು ತಲುಪಬೇಕೆಂದು ಹೋದವರು. ಅಂಥವರಿಗೆ ಅಲ್ಲಿ ಅನ್ನ ಆಹಾರವನ್ನು ಕೊಟ್ಟಿರತಕ್ಕಂಥವರು ಯಾರು ? ಅವರ ಪರಿಸ್ಥಿತಿ ಏನಾಗಿದೆ ಎಂದು ವಿಚಾರಿಸಿದ್ದೀರಾ ? ಹೀಗೆ ನಾವು ಮಾತ್ರ ಅಧಿಕಾರದ ಗದ್ದುಗೆಯಲ್ಲಿ ಆರಾಮವಾಗಿದ್ದೇವೆ ಎಂದು ತಿಳಿದುಕೊಂಡಿದ್ದರೆ, ಅದು ಮೂರ್ಖಿತನದ ಪರಮಾವಧಿ ಎಂದು ನಾನು ಹೇಳಬೇಕಾಗುತ್ತದೆ. ಆದ್ದರಿಂದ ದಯ ಮಾಡಿ ಹೀಗೆ ಸುಮ್ಮನೆ ಕುಳಿತಿರುವುದನ್ನು ಬಿಟ್ಟು ಮದ್ರಾಸ್‌ನಲ್ಲಿರತಕ್ಕಂಥ ರೈತರನ್ನು ಡೆಲ್ಲಿಗೆ ತಲುಪಿಸತಕ್ಕಂಥ ಏರ್ಪಾಡನ್ನು ಮಾಡಿ.

ಇಲ್ಲಿರತಕ್ಕಂಥ ರೈತರು, ಬೆಂಗಳೂರಿಗೆ ಬಂದಿರತಕ್ಕಂಥ ರೈತರು, ಡೆಲ್ಲಿಗೆ ಹೋಗಬೇಕೆಂದು ರೈತರು ಏನು ಪ್ರಯತ್ನ ಮಾಡುತ್ತಾ ಇದ್ದಾರೆ, ಅವರನ್ನು ಡೆಲ್ಲಿಗೆ ತಲುಪಿಸತಕ್ಕಂಥ ವ್ಯವಸ್ಥೆ ಮಾಡಿ. ಮೈಸೂರು–ಬೆಂಗಳೂರು ರೈಲನ್ನು ಕೂಡ ನೀವು ನಿಲ್ಲಿಸಿದ್ದೀರಿ. ಹೀಗೆ ಮಾಡುವುದನ್ನು ಮುಂದುವರಿಸಿಕೊಂಡು ಹೋದರೆ ರೈತರ ಸಿಟ್ಟಿನ ಜ್ವಾಲೆಯಲ್ಲಿ ಸುಟ್ಟು ಬೂದಿಯಾಗುವ ಕಾಲ ದೂರವಿಲ್ಲ ಎಂದು ಹೇಳಿ, ರೈತರನ್ನು ಕೆಣಕತಕ್ಕಂಥ ಕೆಲಸವನ್ನು ದಯವಿಟ್ಟು ಮಾಡಬೇಡಿ ಎಂದು ಎಚ್ಚರಿಕೆ ಕೊಡುತ್ತೇನೆ. ಆ ಕಡೆ ಕುಳಿತಿರುವವರು ಯಾರೂ ರೈತರು ಇಲ್ಲ ಎಂದು ನಾನು ಮಾತನಾಡುತ್ತಾ ಇಲ್ಲ. ರೈತರ ಬಗ್ಗೆ ಕಾಳಜಿ ಇರುವವರೂ ಕೂಡ ಇದ್ದೀರಿ. ರೈತರ ಹಿತ ಕೇವಲ ರೈತ ಸಂಘದವರಿಗೆ ಅಥವಾ ನಮಗೆ ಮಾತ್ರ ಅಲ್ಲ, ಎಲ್ಲರಿಗೂ ಇದೆ. ಇದನ್ನು ಪಕ್ಷಾತೀತವಾಗಿ ನೋಡತಕ್ಕಂಥಾದ್ದು. ಆದ್ದರಿಂದ ಸಧ್ಯಕ್ಕೆ ಏನು ಏರ್ಪಾಡು ಮಾಡಬೇಕೋ ಅದನ್ನು ಮಾಡಿ ಎಂದು ತಮ್ಮ ಮೂಲಕ ಸರಕಾರಕ್ಕೆ ಸೂಚಿಸ ಬಯಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಮುಖ್ಯಮಂತ್ರಿಗಳು ಬಂದು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಅವರನ್ನು ಬಿಡುಗಡೆ ಮಾಡುತ್ತೀರೋ ಇಲ್ಲವೋ ಎಂದು ಹೇಳಿ. ಈ ತರಹ ಬಂಧಿಸಿರತಕ್ಕಂಥಾದ್ದು ಒಳ್ಳೆಯದಲ್ಲ.

ಶ್ರೀ ವೈ.ಕೆ ರಾಮಯ್ಯ:– ರೈತರನ್ನು ಜೈಲಿನಲ್ಲಿಟ್ಟು ಇಲ್ಲಿ ಸಭೆಯಲ್ಲಿ ನಾವು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ .....

(ಗೊಂದಲ)

(ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಮತ್ತು ವಾಟಾಳ್ ನಾಗರಾಜ್‌ರವರು ಸದನದ ವೆಲ್‌ನಲ್ಲಿ ಬಂದು ನಿಂತು ಘೋಷಣೆ ಕೂಗಿದರು)

ಶ್ರೀ ಆರ್.ವಿ. ದೇಶಪಾಂಡೆ:– ಇದು ಬಹಳ ಮಹತ್ವವಾದಂತಹ ಸಮಸ್ಯೆ. ಇದು ಪತ್ರಿಕೆಗಳಲ್ಲಿ ಬಂದಿದೆ. ರೈತರು ಧರಣಿ ಮಾಡುವುದಕ್ಕೆ ಹೋಗಿಲ್ಲ, ಮರ್ಡರ್ ಮಾಡುವುದಕ್ಕೆ ಹೋಗಿಲ್ಲ. ತಮ್ಮ ಅಧಿಕಾರದ ಸಲುವಾಗಿ, ತಮ್ಮ ಹಕ್ಕಿನ ಸಲುವಾಗಿ ಹೋರಾಟ ಮಾಡಿರುವಾಗ ಸರ್ಕಾರಕ್ಕೆ ಸಮಯ ಬೇಕೆಂಬುದಿಲ್ಲ. ನೀವು ನೇರವಾಗಿ ಹೇಳಬಹುದು. ಇವತ್ತು ನಾವು ಎಲ್ಲಾ ರೈತರನ್ನು ಬಿಡುಗಡೆ